ಇ) 2014ರ ಹುಲಿ ಗಣತಿ ಪ್ರಕಾರ ರಾಜ್ಯದಲ್ಲಿ 406 ಹುಲಿಗಳಿವೆ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ನವದೆಹಲಿರವರ ಮತ್ತು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರನ್ವಯ ಹುಲಿಗಳ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ವನ್ಯ ಮೃಗಗಳ ದಾಳಿ

3136 (3316); ಶ್ರೀ ಜಗದೀಶ್ ಕುಮಾರ್ ಆರ್(ಹೆಬ್ಬಾಳ)

ಅ) ರಾಜ್ಯದಾದ್ಯಂತ ಕಳೆದ ಮೂರು ವರ್ಷಗಳಲ್ಲಿ ವನ್ಯ ಮೃಗಗಳ ದಾಳಿಗೆ ನಾಗರೀಕರುಗಳು ತುತ್ತಾಗಿ ಮರಣ ಹಾಗೂ ಗಾಯಗೊಂಡ ಪ್ರಕರಣಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಸದರಿ ದಾಳಿಯಲ್ಲಿ ತುತ್ತಾಗಿರುವವರಿಗೆ ಸರ್ಕಾರವು ಘೋಷಿಸಿರುವ ಪರಿಹಾರಗಳೆಷ್ಟು (ಪ್ರಕರಣವಾರು ವಿವರ ನೀಡುವುದು);

ಇ) ಸರ್ಕಾರವು ಘೋಷಿಸಿರುವ ಪರಿಹಾರವನ್ನು ನೀಡಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣ ನೀಡುವುದು (ಪ್ರಕರಣವಾರು ವಿವರ ನೀಡುವುದು);

ಈ) ವನ್ಯ ಮೃಗಗಳಿಂದಾಗುತ್ತಿರುವ ನಿರಂತರ ದಾಳಿಯನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಮತ್ತು ಆ) ಕಳೆದ ಮೂರು ವರ್ಷಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗಿರುವ ಮಾನವ ಪ್ರಾಣ ಹಾನಿ ಮತ್ತು ಗಾಯಗೊಂಡ ಪ್ರಕರಣಗಳ ವಿವರ ಹಾಗೂ ದಯಾತ್ಮಕ ಧನವನ್ನು ಪಾವತಿಸಿರುವ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು, ನಿಯಮಾನುಸಾರ ದಯಾತ್ಮಕ ಧನವನ್ನು ಪಾವತಿಸಲಾಗಿರುತ್ತದೆ.

ಈ) ವನ್ಯಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಇಲಾಖೆಯು ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಕಾಡಾನೆಗಳು ಅರಣ್ಯ ಪ್ರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ ದಾಳಿ ಮಾಡುವುದನ್ನು ತಡೆಗಟ್ಟುವ ಸಲುವಾಗಿ ಸೂಕ್ಷ್ಮ ಪ್ರದೇಶಗಳ ಅರಣ್ಯದ ಅಂಚಿನಲ್ಲಿ ಕಾಡಾನೆ ನಿರೋಧಕ ಕಂದಕ ಮತ್ತು ಸೌರಶಕ್ತಿ ಬೇಲಿ ನಿರ್ಮಿಸಿ ನಿರ್ವಹಿಸಲಾಗುತ್ತಿದೆ.

2. ಕಾಡಾನೆಗಳು ಪದೇ ಪದೇ ಕೃಷಿ ಜಮೀನುಗಳಿಗೆ ದಾಳಿ ಮಾಡುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಪುನಃ ಕಾಡಿಗೆ ಹಿಮ್ಮೆಟ್ಟಿಸುವ ಸಲುವಾಗಿ ಕಾಡಾನೆ ತಡೆ ತಂಡಗಳನ್ನು ರಚಿಸಿ, ಪ್ರತಿಯೊಂದು ತಂಡದಲ್ಲೂ ಸ್ಥಳೀಯರ ಜೊತೆಗೆ ನಾಲ್ಕು ಮಂದಿ ಅರಣ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಕ್ರಮಕೈಗೊಳ್ಳಲಾಗುತ್ತಿದೆ.

3. ಸದರಿ ಸಿಬ್ಬಂದಿಗಳಿಗೆ ವಾಕೀ–ಟಾಕೀ, ಗನ್ ಹಾಗೂ ವಾಹನಗಳ ಸೌಲಭ್ಯಗಳನ್ನು ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಒದಗಿಸಲಾಗುತ್ತಿದೆ.

4. ಸಿಬ್ಬಂದಿಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ಒದಗಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

5. ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿ ಕಂಡುಬರುವ ಸೂಕ್ಷ್ಮ ಪ್ರದೇಶಗಳಲ್ಲಿ ಅವಶ್ಯಕತೆಗನುಗುಣವಾಗಿ Rapid Response Teams (RRT) ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನೇ Rapid Response Teams(RRT) ತಂಡಗಳನ್ನಾಗಿಸಿ, ಕಾಡಾನೆಗಳ ಹಾವಳಿಯನ್ನು ನಿಯಂತ್ರಿಸಲಾಗುತ್ತಿದೆ.

6. ವನ್ಯಪ್ರಾಣಿಗಳ ಹಾವಳಿ ಕಂಡುಬಂದಾಗ ಕೂಡಲೇ ಕ್ರಮ ಕೈಗೊಳ್ಳುವ ಸಂಬಂಧ ಕೇಂದ್ರ ಸ್ಥಾನದಲ್ಲಿ 24 ಗಂಟೆಗಳ ಕಾಲ ಸೇವೆ ಒದಗಿಸುವ ಸಲುವಾಗಿ ಶುಲ್ಕ ರಹಿತ ಸೇವಾ ಸಂಖ್ಯೆ (Toll Free Number) ನ್ನು ಅನುಷ್ಠಾನಗೊಳಿಸಲಾಗಿದೆ. Toll Free Number– 1800 425 1314.

7. ವನ್ಯಪ್ರಾಣಿಗಳ ದಾಳಿಯ ಸಮಯದಲ್ಲಿ ಏನನ್ನು ಮಾಡಬೇಕು ಮತ್ತು ಮಾಡಬಾರದು ಎಂಬುದರ ಬಗ್ಗೆ ಸಾರ್ವಜನಿಕರಲ್ಲಿ ಸೂಚನಾ ಫಲಕದ ಹಾಗೂ ಗ್ರಾಮಸ್ಥರೊಂದಿಗೆ ಸಭೆಯನ್ನು ನಡೆಸುವ ಮುಖಾಂತರ ಜಾಗೃತಿಯನ್ನು ಮೂಡಿಸಲಾಗುತ್ತಿದೆ.

8. ವನ್ಯಪ್ರಾಣಿಗಳಿಂದ ಬೆಳೆಹಾನಿ ಹಾಗೂ ಮಾನವ ಪ್ರಾಣ ಹಾನಿ ಆಗಿರುವುದಕ್ಕೆ ಕ್ರಮವಾಗಿ ಸರ್ಕಾರದ ಆದೇಶ ಸಂಖ್ಯೆಃ ಅಪಜೀ 143 ಎಫ್‌ಡಬ್ಲ್ಯುಎಲ್ 2010, ದಿನಾಂಕಃ 30.04.2011 ಮತ್ತು ಅಪಜೀ 143 ಎಫ್‌ಡಬ್ಲ್ಯುಎಲ್ 2010, ದಿನಾಂಕಃ 03.08.2011ರ ಪ್ರಕಾರ ದಯಾತ್ಮಕ ಧನವನ್ನು ಪಾವತಿಸಿ ಕ್ರಮಕೈಗೊಳ್ಳಲಾಗಿದೆ.

9. ವನ್ಯಪ್ರಾಣಿಗಳು ಅರಣ್ಯ ಪ್ರದೇಶಗಳ ಒಳಗೆ ನೀರಿನ ಸೌಕರ್ಯವನ್ನು ಸತತವಾಗಿ ಒದಗಿಸಿ, ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ.

10. ಅರಣ್ಯ ಪ್ರದೇಶಗಳಲ್ಲಿ ವನ್ಯಪ್ರಾಣಿಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳುತೆಗೆಯುವುದು, ಗಲ್ಲಿಪ್ಲಗ್, ಚೆಕ್‌ಡ್ಯಾಮ್, ನಾಲಾಬಂಡ್, ಇತ್ಯಾದಿ ಕೆಲಸಗಳನ್ನು ರಕ್ಷಿತಾರಣ್ಯಗಳಲ್ಲಿ ತೆಗೆದು ಕೊಳ್ಳಲಾಗುತ್ತಿದೆ.

11. ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಕಾಡು ಪ್ರಾಣಿ/ಕಾಡಾನೆಗಳಿಂದ ಉಂಟಾಗುವ ಪ್ರಾಣಹಾನಿ, ಬೆಳೆಹಾನಿ ತಡೆಯಲು ರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗುವುದು.

12. 2014–15ನೇ ಸಾಲಿಗೆ ರೈತರು ಬೆಳೆದ ಬೆಳೆಗಳನ್ನು ರಕ್ಷಿಸಲು ಅರಣ್ಯ ಇಲಾಖೆ ಮತ್ತು ಗ್ರಾಮಸ್ಥರ ಸಹಯೋಗದೊಂದಿಗೆ ಸಹಾಯಧನ ರೂಪದಲ್ಲಿ 50:50 ಆಧಾರದಲ್ಲಿ ಸೌರಶಕ್ತಿ ಬೇಲಿಯನ್ನು ನಿರ್ಮಾಣ ಮಾಡುವ ಕಾರ್ಯ ಕೈಗೊಳ್ಳಲಾಗುತ್ತಿದೆ.

13. ರಾಜ್ಯದಲ್ಲಿ ಆನೆಗಳ ಸಂಖ್ಯೆ ಅಧಿಕವಾಗಿರುವ ಪ್ರದೇಶಗಳಲ್ಲಿ ಮಾನವ ಆನೆ ಸಂಘರ್ಷವನ್ನು ಪರಿಣಾಮಕಾರಿಯಾಗಿ ತಡೆಯುವ ಸಲುವಾಗಿ ಉಪಯೋಗಿಸಿ ಬಿಟ್ಟ ರೈಲ್ವೆ ಹಳಿಗಳನ್ನು ಬಳಸಿಕೊಂಡು ಅರಣ್ಯಗಳ ಸುತ್ತ ಬ್ಯಾರಿಕೇಡನ್ನು ನಿರ್ಮಾಣ ಮಾಡುವ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತಿದೆ.

14. ರಾಜ್ಯದಲ್ಲಿ ಚಿರತೆ ಹಾವಳಿ ತಡೆಗಟ್ಟಲು ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ತಮ್ಮ ತಮ್ಮ ವಿಭಾಗಗಳಲ್ಲಿ 3–4 ಜನರನ್ನೊಳಗೊಂಡ ರಕ್ಷಣಾ ಪಡೆಯನ್ನು ರಚಿಸಿ ಹಾವಳಿ ಪ್ರದೇಶಗಳನ್ನು ಗುರುತಿಸಿ ಜನಸಂಪರ್ಕ ಸಭೆ ನಡೆಸಲು ಹಾಗೂ ಮುಂಜಾಗ್ರತಾ ಕ್ರಮವಾಗಿ ಹಾವಳಿ ಇರುವ ಕಡೆ ರಾತ್ರಿ ಗಸ್ತು ಮಾಡಲು ಮತ್ತು ಚಿರತೆ ಹಿಡಿಯಲು ಬೇಕಾದ ಬೋನು, Tranquilizer Gun ಮತ್ತಿತರ ಉಪಕರಣಗಳನ್ನು ಸಿದ್ಧತೆ ಮಾಡಿಕೊಂಡಿರುತ್ತಾರೆ. ಅಲ್ಲದೆ ನಿರಂತರವಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳು ಸಾರ್ವಜನಿಕರಿಗೆ ತಿಳುವಳಿಕೆ ನೀಡುವುದಲ್ಲದೇ, ಅದರಲ್ಲೂ ಕಾಡಂಚಿನಲ್ಲಿ ವಾಸಿಸುವ ಜನರಿಗೆ ಹೆಚ್ಚಿನ ತಿಳುವಳಿಕೆ ನೀಡುವಂತೆ ರಾಜ್ಯದ ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಜಗದೀಶ್ ಶೆಟ್ಟರ್.ಆರ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3316ಕ್ಕೆ ಅನುಬಂಧ

ವಿಭಾಗ/ ಜಿಲ್ಲಾವಾರು	2011-12		2012-13		2013-14	
	ಮೃತ ಪಟ್ಟವರ ಸಂಖ್ಯೆ	ಮೊತ್ತ	ಮೃತ ಪಟ್ಟವರ ಸಂಖ್ಯೆ	ಮೊತ್ತ	ಮೃತ ಪಟ್ಟವರ ಸಂಖ್ಯೆ	ಮೊತ್ತ
ಮಡಿಕೇರಿ/ಮಡಿಕೇರಿ ಜಿಲ್ಲೆ	01	3.50	-	-	02	10.00
ವಿರಾಜಪೇಟೆ/ಮಡಿಕೇರಿ ಜಿಲ್ಲೆ	02	10.00	05	25.00	03	15.00
ಹಾಸನ/ಹಾಸನ ಜಿಲ್ಲೆ	04	20.00	06	30.00	08	40.00
ಹುಣಸೂರು ವನ್ಯಜೀವಿ/ಮೈಸೂರು ಜಿಲ್ಲೆ	02	8.50	-	-	01	5.00
ಮೈಸೂರು/ಮೈಸೂರು ಜಿಲ್ಲೆ	01	5.00	02	10.00	01	5.00
ರಾಮನಗರ/ರಾಮನಗರ ಜಿಲ್ಲೆ	01	5.00	05	25.00	05	25.00
ಬೆಂಗಳೂರು ನಗರ/ ಬೆಂಗಳೂರು ನಗರ ಜಿಲ್ಲೆ	01	5.00	01	5.00	01	5.00
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ / ಬೆಂಗಳೂರು ನ.ಜಿಲ್ಲೆ	-	-	07	35.00	-	-
ಬೆಂಗಳೂರು ಗ್ರಾಮಾಂತರ/ ಬೆಂಗಳೂರು (ಗ್ರಾ) ಜಿಲ್ಲೆ	-	-	01	5.00	02	10.00

ಮಂಡ್ಯ/ಮಂಡ್ಯ ಜಿಲ್ಲೆ	02	10.00	01	5.00	-	-
ಹೊಳೆನಾಲ/ಚಾಮರಾಜನಗರ ಜಿಲ್ಲೆ	01	5.00	02	10.00	03	15.00
ಕಾವೇರಿ ವಜೀ/ ಚಾಮರಾಜನಗರ	-	-	-	-	01	5.00
ಬಂಡೀಪುರ/ಚಾಮರಾಜನಗರ ಜಿಲ್ಲೆ	-	-	02	10.00	04	20.00
ಬಿಆರ್.ಟಿ./ಚಾಮರಾಜನಗರ ಜಿಲ್ಲೆ	-	-	04	20.00	01	5.00
ಕೋಲಾರ/ಕೋಲಾರ ಜಿಲ್ಲೆ	-	-	03	15.00	03	15.00
ಮಂಗಳೂರು/ಮಂಗಳೂರು ಜಿಲ್ಲೆ	-	-	02	10.00	-	-
ತುಮಕೂರು/ತುಮಕೂರು ಜಿಲ್ಲೆ	-	-	03	15.00	03	15.00
ಕಾರವಾರ/ಉತ್ತರ ಕನ್ನಡ ಜಿಲ್ಲೆ	-	-	-	-	01	5.00
ದಕ್ಷಿಣಾ/ದಕ್ಷಿಣಾ ಜಿಲ್ಲೆ	01	5.00	-	-	02	10.00
ಗುಲ್ಬರ್ಗಾ/ಗುಲ್ಬರ್ಗಾ ಜಿಲ್ಲೆ	03	15.00	02	10.00	01	5.00
ಕೊಪ್ಪ/ಚಿಕ್ಕಮಗಳೂರು ಜಿಲ್ಲೆ	-	-	-	-	01	5.00
ಚಿತ್ರದುರ್ಗ/ಚಿತ್ರದುರ್ಗ ಜಿಲ್ಲೆ	-	-	-	-	01	5.00
ಬಾಗಲಕೋಟೆ/ ಬಾಗಲಕೋಟೆ ಜಿಲ್ಲೆ	-	-	01	5.00	01	5.00
ಚಿಕ್ಕಮಗಳೂರು/ಚಿಕ್ಕಮಗಳೂರು ಜಿಲ್ಲೆ	-	-	-	-	01	5.00
ಧಾರವಾಡ/ಉತ್ತರ ಕನ್ನಡ ಜಿಲ್ಲೆ	-	-	-	-	01	5.00
ಬೀದರ/ಬೀದರ ಜಿಲ್ಲೆ	-	-	01	5.00	-	-
ಬಳ್ಳಾರಿ /ಬಳ್ಳಾರಿ ಜಿಲ್ಲೆ	-	-	02	10.00	-	-
ದಾವಣಗೆರೆ/ದಾವಣಗೆರೆ ಜಿಲ್ಲೆ	01	5.00	-	-	-	-
ಸಾಗರ /ಶಿವಮೊಗ್ಗ ಜಿಲ್ಲೆ	01	5.00	-	-	-	-
ಭದ್ರಾ/ಚಿಕ್ಕಮಗಳೂರು ಜಿಲ್ಲೆ	01	5.00	-	-	-	-
ಒಟ್ಟು	22	107.00	50	250.00	45	235.00

ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗಿರುವ ಮಾನವ ಗಾಯ ಪ್ರಕರಣಗಳ ಜಿಲ್ಲಾವಾರು ವಿವರಗಳು ಕೆಳಕಂಡಂತಿದೆ.

ಕ್ರ ಸಂ	ವಿಭಾಗ/ ಜಿಲ್ಲಾವಾರು	2011-12		2012-13		2013-14	
		ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ
1	ಬೆಂಗಳೂರು ನಗರ /ಬೆಂಗಳೂರು ನಗರ ಜಿಲ್ಲೆ	0	0	0	0	02	10000
2	ಬೆಳ್ಳೇಯಪ್ಪ/ಬೆಂಗಳೂರು ನಗರ ಜಿಲ್ಲೆ	02	25,400.00	02	19535.00	0	0
4	ರಾಮನಗರ/ ರಾಮನಗರ ಜಿಲ್ಲೆ	0	0	0	0	15	79999.00
5	ಕೋಲಾರ/ ಕೋಲಾರ ಜಿಲ್ಲೆ	01	5000.00	03	48447.00	01	7180.00
6	ಚಳಗಾವಿ/ಚಳಗಾವಿ ಜಿಲ್ಲೆ	01	10000.00	04	47000.00	01	7800.00
7	ಗೋವಾಕ/ಚಳಗಾವಿ ಜಿಲ್ಲೆ	0	0	0	0	01	5000.00
8	ಬಳ್ಳಾರಿ/ಬಳ್ಳಾರಿ ಜಿಲ್ಲೆ	01	20000.00	03	56084.00	06	83285.00
9	ಚಿತ್ರದುರ್ಗ / ಚಿತ್ರದುರ್ಗ ಜಿಲ್ಲೆ	01	119045.00	10	161358.00	08	120699.00
10	ದಾವಣಗೆರೆ / ದಾವಣಗೆರೆ ಜಿಲ್ಲೆ	01	15088.00	04	53878.00	0	0
11	ಹೊಬ್ಬಳ / ಹೊಬ್ಬಳ ಜಿಲ್ಲೆ	02	40000.00	0	0	0	0

12	ದರೋಜಿ ವನ್ಯಧಾಮ / ಬಳ್ಳಾರಿ ಜಿಲ್ಲೆ	0	0	0	0	01	5000.00
13	ಚಾಮರಾಜನಗರ/ ಚಾಮರಾಜನಗರ ಜಿಲ್ಲೆ	03	17387.00	13	89256.00	03	22027.00
14	ಚಾಮರಿ /ಚಾಮರಾಜನಗರ ಜಿಲ್ಲೆ	0	0	0	0	01	19526.00
15	ಹೊಳ್ಳಗಾಲ/ ಚಾಮರಾಜನಗರ ಜಿಲ್ಲೆ	04	13000.00	02	24156.00	05	70065.00
16	ಚಿಕ್ಕಮಗಳೂರು/ ಚಿಕ್ಕಮಗಳೂರು ಜಿಲ್ಲೆ	02	18830.00	0	0	05	60434.00
17	ಕೊಪ್ಪ/ ಚಿಕ್ಕಮಗಳೂರು ಜಿಲ್ಲೆ	0	0	01	5000.00	02	23865.00
18.	ಗದಗ್ /ಗದಗ ಜಿಲ್ಲೆ	0	0	0	0	02	7800.00
19.	ಹಾವೇರಿ/ ಹಾವೇರಿ ಜಿಲ್ಲೆ	0	0	01	3131.00	0	0
20.	ಬಂಡೀಪುರ/ ಮೈಸೂರು ಜಿಲ್ಲೆ	08	84276.00	07	62053.00	16	157619.00
21.	ಮಾಸಿಂತಿ ವನ್ಯಜೀವಿ/ ಮೈಸೂರು ಜಿಲ್ಲೆ	04	49712.00	09	130000.00	06	55683.00
22	ಬೀದರ್ / ಬೀದರ್ ಜಿಲ್ಲೆ	45	130500.00	0	0	05	33191.00
23	ಕಲಬುರ್ಗಿ / ಕಲಬುರ್ಗಿ ಜಿಲ್ಲೆ	17	144000.00	10	79500.00	03	43000.00
24	ರಾಯಚೂರು / ರಾಯಚೂರು ಜಿಲ್ಲೆ	05	32400.00	0	0	05	39754.00
25	ಯಾದಗಿರಿ / ಯಾದಗಿರಿ ಜಿಲ್ಲೆ	03	18000.00	01	5000.00	02	30000.00
26	ದಾಂಡೇಲಿ/ಉತ್ತರ ಕನ್ನಡ ಜಿಲ್ಲೆ	0	0	01	20000.00	04	23483.00
27	ದಂಡಾಳ/ಉತ್ತರ ಕನ್ನಡ ಜಿಲ್ಲೆ	02	21324.00	01	10300.00	04	67433.00

28	ಹೊನ್ನಾವರ / ಉತ್ತರ ಕನ್ನಡ ಜಿಲ್ಲೆ	01	20000.00	01	5000.00	02	11480.00
29	ಶಿರಸಿ/ಉತ್ತರ ಕನ್ನಡ ಜಿಲ್ಲೆ	0	0	00	0	01	20000.00
30	ಯಲ್ಲಾಪುರ/ ಉತ್ತರ ಕನ್ನಡ ಜಿಲ್ಲೆ	0	0	07	390716.00	02	28828.00
31	ಹಾಸನ/ ಹಾಸನ ಜಿಲ್ಲೆ	08	59005.00	12	75359.00	06	40915.00
32	ತುಮಕೂರು/ ತುಮಕೂರು ಜಿಲ್ಲೆ	09	69825.00	32	277453.00	15	124370.00
33	ಮಡಿಕೇರಿ/ಮಡಿಕೇರಿ ಜಿಲ್ಲೆ	08	67625.00	04	30767.00	04	68539.00
34	ವಿರಾಜಪೇಟೆ/ ಮಡಿಕೇರಿ ಜಿಲ್ಲೆ	06	83523.00	04	21592.00	09	103107.00
35	ಮಡಿಕೇರಿ ವನ್ಯಜೀವಿ / ಮಡಿಕೇರಿ ಜಿಲ್ಲೆ	01	3500.00	02	26000.00	01	20000.00
36	ಕುಂದಾಪುರ/ ಉಡುಪಿ ಜಿಲ್ಲೆ	01	65000.00	04	50000.00	01	11646.00
37	ಮಂಗಳೂರು/ ಮಂಗಳೂರು ಜಿಲ್ಲೆ	0	0	0	0	01	2950.00
38	ಹುಣಸೂರು/ ಮೈಸೂರು ಜಿಲ್ಲೆ	0	0	01	20000.00	02	22975.00
39	ಮೈಸೂರು / ಮೈಸೂರು ಜಿಲ್ಲೆ	15	139986.00	05	42629.00	06	34898.00
40	ಮೈಸೂರು ವನ್ಯಜೀವಿ/ ಮೈಸೂರು ಜಿಲ್ಲೆ	0	0	0	0	0	0
41	ಮಂಡ್ಯ/ ಮಂಡ್ಯ ಜಿಲ್ಲೆ	03	16638.00	04	67454.00	01	8350.00
42	ಭದ್ರಾವತಿ/ ಶಿವಮೊಗ್ಗ ಜಿಲ್ಲೆ	02	40000.00	01	1109.00	04	35000.00
43	ಸಾಗರ/ಶಿವಮೊಗ್ಗ ಜಿಲ್ಲೆ	02	10000.00	0	0	02	22000.00
44	ಶಿವಮೊಗ್ಗ/ ಶಿವಮೊಗ್ಗ ಜಿಲ್ಲೆ	0	0	02	70600.00	0	0
45	ಶಿವಮೊಗ್ಗ ವನ್ಯಜೀವಿ/ ಶಿವಮೊಗ್ಗ ಜಿಲ್ಲೆ	0	0	0	0	02	25973.00
	ಒಟ್ಟು	158	1339064.00	151	1893297.00	157	1553874.00